# ನೆಗೆಟಿವ್ ಪಾತ್ರ ಇಷ್ಟ

**ಅರ್ಚನಾ**

ಸ್ಟಾರ್ ಸುವರ್ಣದ 'ದುರ್ಗಾ'ದ ದಮಯಂತಿ



ಚಿತ್ರ:ಕೆ.ಎಸ್.ನಾಗೇಶ್‌ಕುಮಾರ್

★ ***ಬ್ಲಾಕ್‌ಮೇಲ್ ಮಾಡುವ ಕುತಂತ್ರವೇಕೆ?***

ನನಗೆ ಮದುವೆ ಆಗುವುದಾಗಿ ಹೇಳಿ ಚಂದ್ರಶೇಖರ್ ವಂಚಿಸುವ ಯತ್ನ ಮಾಡಿದ್ದರು. ಆಗ ಅವರನ್ನು ಮದುವೆಯಾಗಲು ತಂತ್ರವನ್ನು ಹೆಣೆಯಲೇಬೇಕಿತ್ತು. ಅವರ ಮೊದಲ ಪತ್ನಿಗೆ ಸುಶ್ರೂಷೆಯ ಜವಾಬ್ದಾರಿ ಹೊತ್ತು, ತನ್ನ ಗಂಡನ ಕೈಯಿಂದಲೇ ಆಕೆಗೆ ವಿಷದ ಮಾತ್ರೆ ನೀಡಿ ಸಾಯಿಸಿದೆ. ಈ ಘಟನೆಯನ್ನು ಬಳಸಿಯೇ ಈಗ ನನ್ನ ಗಂಡನನ್ನು ನಿಯಂತ್ರಿಸುತ್ತಿದ್ದೇನೆ. ಆತನ ವಂಚನೆಯ ಸಿಟ್ಟನ್ನು ತೀರಿಸಿಕೊಳ್ಳಲು ಹೀಗೆ ಮಾಡುತ್ತಿರುವುದು. ಯಾರಿಗೂ ಕೆಟ್ಟದ್ದನ್ನು ಮಾಡುವ ಉದ್ದೇಶ ಇಲ್ಲ. ಆಮೂಲಕ ಮನೆಯ ಸಂಪೂರ್ಣ ಯಜಮಾನಿಕೆ ನನ್ನ ಕೈ ಸೇರಬೇಕು ಎನ್ನುವ ಆಸೆ ಇದೆ.

★ ***ತೆರೆಗೆ ಬಂದು ಹೋಗುವ ಕ್ರಿಯೆ ಹೆಚ್ಚಾಯಿತು ಅಲ್ವಾ?***

ಅಭಿನಯ ನನಗೆ ಗೊತ್ತಿಲ್ಲದ ಕ್ಷೇತ್ರ. ನನ್ನ ಸಹೋದರ ಸಂಬಂಧಿ 15 ವರ್ಷಗಳ ಹಿಂದೆ ಶೂಟಿಂಗ್‌ಗೆಂದು ಮಲ್ಲೇಶ್ವರದಲ್ಲಿರುವ ನಮ್ಮ ಮನೆಯನ್ನು ತೋರಿಸಿದ್ದರು. ಆ ಮನೆಯಲ್ಲಿ ಚಿತ್ರೀಕರಣ ಮಾಡಲಿಲ್ಲ. ಆದರೆ ನನಗೆ ನಟಿಸಲು ಆಹ್ವಾನ ನೀಡಿದರು. ಆಗ ಒಂದೆರಡು ಕಂತುಗಳಲ್ಲಿ ಬಂದು ಹೋಗುವ ಪಾತ್ರ ಮಾಡಿದೆ.

'ಕೋಟಿಗೊಬ್ಬ' ಸಿನಿಮಾಕ್ಕೆ ಕಾಲಿಡುವ ಮೂಲಕ ಮೂರು ನಾಲ್ಕು ಸಿನಿಮಾಗಳನ್ನು ಮಾಡಿದೆ. ಅದಾದಮೇಲೆ 'ರಂಗೋಲಿ' 'ಕುಂಕುಮ ಭಾಗ್ಯ' ಸೇರಿದಂತೆ ಹಲವು ಧಾರಾವಾಹಿಗಳಲ್ಲಿ ನಟಿಸಿದೆ. ಆಮೂಲಕ ಕಿರುತೆರೆಯಲ್ಲಿ ಭದ್ರವಾಗಿ ನೆಲೆ ನಿಂತಿದ್ದೇನೆ.

★ ***ಆರಂಭದ ದಿನಗಳನ್ನು ನೆನೆಪಿಸಿಕೊಂಡರೆ...***

ಎಬಿಸಿಡಿ ಗೊತ್ತಿಲ್ಲದ ಒಂದು ಮಗುವಿನ ಕೈಯಲ್ಲಿ ಪುಸ್ತಕ ನೀಡಿದಂತೆ ಆಗಿತ್ತು. ನನಗೆ ಕ್ಯಾಮೆರಾ ಹೇಗೆ ಎದುರಿಸಬೇಕು ಎನ್ನುವುದು ಗೊತ್ತಿರಲಿಲ್ಲ. ಸಂಭಾಷಣೆಯನ್ನು ಶುದ್ಧವಾಗಿ ಒಪ್ಪಿಸುತ್ತಿದ್ದೆ. ಆದರೆ ಅದಕ್ಕೆ ಸೂಕ್ತವಾಗುವಂತೆ ಭಾವಾಭಿವ್ಯಕ್ತಿ ಇರಲಿಲ್ಲ. ಕ್ರಮೇಣ ಎಲ್ಲದನ್ನೂ ಕಲಿತೆ. ಆಗ ಅಲ್ಲಿನ ವಾತಾವರಣವೂ ತೀರಾ ನಮ್ಮನ್ನು ಅವಮಾನಿಸದೇ ಬೆಳೆಸುವಲ್ಲಿ ಸಹಾಯ ಮಾಡಿತು. ಕಾಲೇಜು ದಿನಗಳಲ್ಲಿ ವಾರಾಂತ್ಯದಲ್ಲಿ ರಂಗತರಗತಿಗಳಿಗೆ ಹೋಗುತ್ತಿದ್ದೆ. ಅದೂ ಕೂಡ ಸಹಾಯಕ್ಕೆ ಬಂದಿರಬಹುದು.

★ ***ಎಂತಹ ಪಾತ್ರಗಳು ನಿಮಗೆ ಇಷ್ಟ ಆಗುತ್ತವೆ?***

ನಾಯಕಿ ಪಾತ್ರ ಒಂದು ಹಂತ. ಅದರಲ್ಲಿಯೂ ಏಕತಾನತೆ ಕಾಡತೊಡಗುತ್ತದೆ. ಅತ್ತೆ, ಅಮ್ಮನ ಪಾತ್ರಗಳು ಒಂದು ರೀತಿಯಲ್ಲಿ ಭಿನ್ನತೆಯನ್ನು ಒಳಗೊಂಡಿರುತ್ತವೆ ಎನಿಸುತ್ತದೆ. ನಾಯಕಿಯ ಪಾತ್ರ ಗೋಳಾಟದಿಂದ ಮುಕ್ತ ಆಗಿರುವುದೇ ಇಲ್ಲ. ಅದರಲ್ಲಿಯೂ ನೆಗೆಟಿವ್ ಪಾತ್ರಗಳು ತುಂಬಾ ಸೊಗಸಾಗಿ ಇರುತ್ತವೆ. ದಮಯಂತಿ ಪಾತ್ರವೂ ಭಿನ್ನ ಮಾದರಿಯ ಪಾತ್ರ ಎನ್ನುವುದನ್ನು ಅನುಭವಿಸುತ್ತಿದ್ದೇನೆ. ತೀರಾ ನೆಗೆಟಿವ್ ಅಲ್ಲದಿದ್ದರೂ ಮತ್ಸರ ಸಾಧಿಸುವ ಪಾತ್ರ. ಗ್ಲಾಮರ್ ಆಗಿರುವುದಲ್ಲದೆ, ಅದಕ್ಕೆ ಪ್ರಾಮುಖ್ಯತೆ ಕೂಡ ಇದೆ. ನಿಜಕ್ಕೂ ಅದ್ಭುತವಾದ ಪಾತ್ರ. ಇಂತಹ ಪಾತ್ರವನ್ನು ನಿರ್ವಹಿಸುತ್ತಿರುವುದು ಇದೇ ಮೊದಲು.

★ ***ಕಿರುತೆರೆಯಲ್ಲಿ ನೆಲೆಯೂರಬೇಕು ಅಂದರೆ...***

ಕೆಲಸವನ್ನು ಪ್ರೀತಿಸಬೇಕು. ಒಂದೆರಡು ಅವಕಾಶಗಳು ಸಿಕ್ಕ ತಕ್ಷಣ ಸೆಲೆಬ್ರಿಟಿ ನೆತ್ತಿಗೆ ಏರಿದರೆ ಮುಂದಿನ ಹಾದಿ ಕಷ್ಟವಾಗುತ್ತದೆ. ಪಾತ್ರಕ್ಕೆ ನ್ಯಾಯವನ್ನು ಕೊಡುವ ಗುಣವನ್ನು ಬೆಳೆಸಿಕೊಳ್ಳಬೇಕು. ಸಹನಟರಿಗೂ ಕಿರಿಕಿರಿ ಆಗುವಂತೆ ನಡೆದುಕೊಂಡರೂ ಮುಂದಿನ ಅವಕಾಶದಿಂದ ವಂಚನೆಗೆ ಒಳಗಾಗಬೇಕಾಗುತ್ತದೆ. ಪಾತ್ರ ಮತ್ತು ಸಮಯಕ್ಕೆ ಬೆಲೆ ಕೊಟ್ಟರೆ ಸಾಕು ಇಲ್ಲಿ ಬೇರೂರಿ ನೆಲೆಗೊಳ್ಳಬಹುದು.

★ ***ತೆರೆಯ ಮತ್ತು ವಾಸ್ತವದ ಬದುಕು ಹೇಗಿದೆ?***

ಪತಿ ನವೀನ್ ವಕೀಲರು. ಅವರ ಬೆಂಬಲದಿಂದಲೇ ನನಗೆ ಅಭಿನಯಿಸಲು ಸಾಧ್ಯವಾಗುತ್ತಿದೆ. ತಿಂಗಳಲ್ಲಿ 15 ದಿನ ಶೂಟಿಂಗ್‌ನಲ್ಲಿ ತಲ್ಲೀನಳಾಗುತ್ತೇನೆ. ಉಳಿದ ದಿನಗಳು ನನ್ನ ಖಾಸಗಿ ಬದುಕಿಗೆ ಮೀಸಲು. ಸಾಮಾನ್ಯ ಜೀವನ ಶೈಲಿ. ಮನೆಗೆ ಶಾಪಿಂಗ್ ಎಲ್ಲಾ ನಾನೇ ಮಾಡುತ್ತೇನೆ. ಇದರ ಜೊತೆ ಸಾಹಿತ್ಯ ಕೃತಿಗಳನ್ನು ಓದುವುದು. ಮನೆಕೆಲಸದಲ್ಲಿ ದಿನ ಹೋಗುವುದೇ ಗೊತ್ತಾಗುವುದಿಲ್ಲ.

■ **ರಾಘು**